"ಶಶಿ, ನಿನಗೆ ನನ್ನ ಮೇಲೆ ಅಸಮಾಧಾನನಾ? ನಿನ್ನಂತೆ ಓದಿಲ್ಲ. ನಿನಗಿಂತ ಕಡಮೆ ಸಂಬಳ ಅಂತಾನೆ? ಶಶಿ, ಆಸ್ತಿ ಅಂತಸ್ತು ಡಿಗ್ರಿ ಹಣಗಳ ನೋಡಿ ಅಳೆಯುವಂಥದ್ದು ಪ್ರೀತಿ ಹೇಗಾಗುತ್ತೆ? ನನ್ನ ನಿನ್ನ ಪ್ರೀತಿ ಇವೆಲ್ಲಕ್ಕೂ ಮೀರಿ ನಿಲ್ಲಬೇಕು..."

"ನಿಜ ರವಿ, ಮಾದರಿ ಪ್ರೀತಿಗಳೆಲ್ಲ ಇವೆಲ್ಲಕ್ಕೂ ಮೀರಿ, ನೆಲ ಬಿಟ್ಟು ಮುಗಿಲಲ್ಲಿ ನಿಲ್ಲಬೇಕು. ಆದರೆ ನಮ್ಮ ಬದುಕಿನ ಮುಂದೆ ಚಾಚಿ ನಿಂತಿರುವ ಈ ಅಖಂಡ ಮೌನವನ್ನು, ಖಾಲಿತನವನ್ನು ಬರೀ ಪ್ರೀತಿಯ ಮಾತುಗಳಿಂದ, ಬರೀ ಪ್ರೀತಿಯ ಪದಗಳಿಂದ ತುಂಬಲು ಸಾಧ್ಯವಿದೆಯೇ? ನನ್ನ ಪ್ರೀತಿಗಾಗಿ ನೀ ಏನಾದರೂ ಮಾಡಲು ಸಿದ್ಧವಿರುವೆಯಾ?" ನೇರವಾಗಿ ಕೇಳಿದೆ. ಉತ್ತರವಿಲ್ಲದೆ ತಬ್ಬಿಬ್ಬಾದ.

★★★

ನನ್ನಲ್ಲೇ ಕಡಗೋಲಿನ ಕಡೆತ–

ಈ ಪ್ರೀತಿಯಾದರೂ ಯಾವುದು? ಎಲ್ಲವನ್ನೂ ಮೀರಿದ ಪ್ರೀತಿ ಯಾವುದು? ಒಬ್ಬನನ್ನು ಅವನೆಲ್ಲ ಓದು, ವಿದ್ಯೆ, ಕೆಲಸ, ಸಾಧನೆ ಎಲ್ಲವನ್ನೂ ಕಳಚಿ ಅವನನ್ನಷ್ಟೇ ಬೆತ್ತಲಾಗಿ ಪ್ರೀತಿಸುವುದ್ಹೇಗೆ? ಅವನೆಲ್ಲ ವಿಶೇಷಣಗಳ, ಕಿರೀಟಗಳ, ಅವನೇರಿದ ಸಿಂಹಾಸನಗಳ ಬದಿಗಿಟ್ಟು ಅವನನ್ನಷ್ಟೇ ಪ್ರೀತಿಸುವುದು ಹೇಗೆ? ಸಹೋದ್ಯೋಗಿ ರಮೇಶನ ಬಡ್ತಿಯಲ್ಲಿ, ಅಧಿಕಾರದಲ್ಲಿ ಅವನ ಯಶಸ್ಸಿಲ್ಲವೆ. ಹಗಲಿರುಳಿನ ದುಡಿತವಿಲ್ಲವೆ? ಅಣ್ಣನ ಗೆಳೆಯ ಹೆಸರಿನ ಮುಂದೆ ಜೋಡಿಸಿಕೊಂಡಿರುವ ಮೂರು ಮೂರು ಡಿಗ್ರಿಗಳಲ್ಲಿ ಅವನ ಪರಿಶ್ರಮವಿಲ್ಲವೆ? ಅವನ ವ್ಯಕ್ತಿತ್ವದ ಕನ್ನಡಿಯಲ್ಲವೆ ಅವೆಲ್ಲ? ಮನೆಯ ಪರಿಸ್ಥಿತಿಯಿಂದಾಗಿ ಎಸ್.ಎಸ್.ಎಲ್.ಸಿ.ಗೇ ಓದು ನಿಲ್ಲಿಸಿ ಕೆಲಸ ಹಿಡಿದಿದ್ದ ರಾಜು ಸಂಜೆ ಕಾಲೇಜಿನಲ್ಲೇ ಪಾಸಾಗಿ ನಾಲ್ಕು ಜನ ತಮ್ಮ– ತಂಗಿಯರ ದಡ ಸೇರಿದ್ದು ಸಾಹಸವಲ್ಲವೇ? ವ್ಯಕ್ತಿಯ ವ್ಯಕ್ತಿತ್ವದ ಅಭಿವ್ಯಕ್ತಿ ಆತನ ಕಾರ್ಯಗಳಲ್ಲಿದೆ, ಬದುಕಿನ ನಿಚ್ಚಳ ನಿಲುವಿನಲ್ಲಿದೆ. ಅವುಗಳೆಲ್ಲದರ ಹೊರತಾಗಿ ಮನುಷ್ಯ ಮನುಷ್ಯನ ನಡುವಿನ ಅಂತರವಾದರೂ ಏನಿದೆ? ಏರು ತಗ್ಗಿಲ್ಲದ ಸಮತಟ್ಟ ನೆಲದಲ್ಲಿ ರವಿ ಜೋಡೆತ್ತಿನ ಗಾಡಿ ಹೂಡಬಯಸಿದ್ದಾನೆ.

ಅಮ್ಮ ಅಪ್ಪನ ಕಣ್ಣಿನಲ್ಲಂತೂ ರವಿ ಅಚ್ಚುಮೆಚ್ಚಿನ ಭಾವೀ ಅಳಿಯ. 'ರವಿ ತುಂಬಾ ಒಳ್ಳೆಯವನು, ಒಂದು ಬೀಡಿ ಸಿಗರೇಟಿನ ಚಟವೂ ಇಲ್ಲ...' ಅಮ್ಮನ 'ಒಳ್ಳೆಯ ಗಂಡ'ನ ಕಲ್ಪನೆ ಅಲ್ಲಿಗೇ ನಿಂತಿದೆ. ತಂದು ಹಾಕುವ, ಪ್ರೀತಿಸುವ ಕೆಡುಕನೋ, ಕುಡುಕನೋ ಅಲ್ಲದ, ಕೆಟ್ಟ ಚಾಳಿಗಿಳಿಯದ ಗಂಡ 'ದೇವರೇ' ಸರಿ. ನನ್ನ 'ಗಂಡ'ನ ಅವಶ್ಯಕತೆಗಳು ಅಮ್ಮನಿಗಿಂತಾ ಭಿನ್ನವಾಗಿವೆ. ಅಮ್ಮನಿಗೆ ಕೈಗೆ ಕಾಸು ಹಾಕಿ. ಹೊಟ್ಟೆ ಬಟ್ಟೆ ನೋಡಿಕೊಂಡು, ಪರ ಹೆಂಗಸರ ಸಹವಾಸಕ್ಕೆ ಹೋಗದೆ, ಕುಡಿಯದೆ ಬಡಿಯದೆ ಇರುವ ಗಂಡ– ಅಷ್ಟೆ ಅಮ್ಮನ 'ಗಂಡ'ನ ಉತ್ಕೃಷ್ಟ ಕಲ್ಪನೆ. ಅಪ್ಪ, ಹೆಚ್ಚು ಕಮ್ಮಿ ಈ ಕಲ್ಪನೆಗೆ ಹೊಂದಿ ಬಂದಿದ್ದರು. ಆಗೊಮ್ಮೆ, ಈಗೊಮ್ಮೆ ಸಂಯಮ ಕಳೆದುಕೊಂಡದ್ದು ತಿಳಿದಿತ್ತು. ಆದರೂ, 'ಸವತೀನೇ ಮನೆಗೆ ತರಲಿಲ್ಲವಲ್ಲ' ಎಂಬ ಸಮಾಧಾನದಲ್ಲಿ ಉದಾರವಾಗಿ ಅಮ್ಮ ಕ್ಷಮಿಸಿಬಿಟ್ಟಿದ್ದಳು. ಕ್ಷಮಿಸದೆ ಇರುವ ಆಯ್ಕೆಯಾದರೂ ಎಲ್ಲಿತ್ತು ಅವಳಿಗೆ? ಹಳ್ಳಿಯಲ್ಲಿದ್ದ ಅವಳ ಅಪ್ಪ– ಅಮ್ಮ ಎಂದೋ ಪರಲೋಕ ಸೇರಿದ್ದರು. ಸ್ಕೂಲಿನ ಮೆಟ್ಟಿಲೂ ಕಾಣದೆ, ಅಪ್ಪನ ಮೇಲೆ ಅವಲಂಬಿತ, ಅಮ್ಮನ ಬದುಕಿನಲ್ಲಿ ಆಯ್ಕೆಗಳಿರಲಿಲ್ಲ.

ಆದರೆ ನನ್ನ ಒಳ್ಳೆಯ ಗಂಡನ ಕಲ್ಪನೆಯಲ್ಲಿ ಅಮ್ಮನ ಹೇಳಿಕೆಗಳೆಲ್ಲ ಇರಬೇಕಾದರೂ ಅವು